**ನಾನು ಪದಗಳಲ್ಲಿರುವೆ**
**ಬಲಹೀನಳೆಂದರೂ ಅವಮಾನಿಸಿದರೂ**
**ಸೆರೆಮನೆಗಳಲ್ಲಿ ಕೊರಗದೆ**
**ಪ್ರೇಮ ಹೋರಾಟ ಅಧಿಕಾರಗಳ ನಡುವಿಂದ ಬರುವೆ**

**ಇತಿಹಾಸ ಹೆಣ್ಣೆಂದರೂ ನಾನು**
**ಸ್ವಾತಂತ್ರ್ಯದ ಬಾವುಟ ಹಿಡಿದು**
**ತನ್ನ ರೂಹನ್ನು ರೂಪಿಸಿಕೊಂಡ ಮಲಾಲೈ ಜೊತೆಗೇ**
**ಹುಟ್ಟಿದವಳು**

**ನನ್ನ ದೇಶದ ಬಾವುಟ ಕೆಂಪಾಗಿದೆ ರಾಬಿಯಾಳ**
**ರಕ್ತದಿಂದ**
**ಕಪ್ಪಾಗಿದೆ ನಾದಿಯಾಳ ಸಾವಿನಿಂದ**
**ಹಸಿರಾಗಿದೆ ಮಲಾಲೈ ಹುತಾತ್ಮಳಾದಾಗಿನಿಂದ**

**ಟಿಪ್ಪಣಿಗಳು: * ಮಲಾಲೈ:** ಬ್ರಿಟಿಷರ ವಿರುದ್ಧ ಸೈನ್ಯ ಸೇರಿ ಹೋರಾಡಿದ ಆಫ್ಘನ್ ಮಹಿಳೆ. ಆಫ್ಘಾನಿಸ್ತಾನದ ಜನಪದ ಕಥೆಗಳಲ್ಲಿ ಆಕೆ ಮಹಾನಾಯಕಿ. ತಾನು ಮದುವೆಯಾಗಲಿದ್ದ ಪ್ರಿಯಕರನನ್ನು ಬ್ರಿಟಿಷರ ವಿರುದ್ಧ ಹೋರಾಡಲು ಹುರಿದುಂಬಿಸಿ ಅವನನ್ನು ಕಳೆದುಕೊಂಡ ದುರಂತ ನಾಯಕಿ.

* **ನಾದಿಯಾ:** ಕಾವ್ಯ ಬರೆಯುತ್ತಾಳೆ ಎಂಬ ಕಾರಣಕ್ಕಾಗಿ ಗಂಡನಿಂದ 2005ರಲ್ಲಿ ಹತ್ಯೆಗೀಡಾದ ಆಫ್ಘನ್ ಕವಯಿತ್ರಿ.

* * *

ರಾಬಿಯಾಳ ಸಾವಿನ ನಂತರವೂ ಅವಳ ವ್ಯಕ್ತಿತ್ವ ಆಫ್ಘಾನಿಸ್ತಾನದಲ್ಲಿ ಎಲ್ಲ ನಿರ್ಬಂಧಗಳ ನಡುವೆಯೂ ಹೆಣ್ಣಿನ ಅವಳ ಸೃಜನಶೀಲತೆಯ ಹುಡುಕಾಟ ಮತ್ತು ಸ್ವತಂತ್ರ ವ್ಯಕ್ತಿತ್ವದ ಸ್ಥಾಪನೆಗೆ, ದೊಡ್ಡದೊಂದು ವೈಚಾರಿಕ ಸಂಚಲನಕ್ಕೆ ಕಾರಣವಾಗಿದೆ. ಆಕೆಯ ದೃಷ್ಟಾಂತ ಪ್ರತಿವರ್ಷವೂ ಹಲವಾರು ಕತೆ ಕಾದಂಬರಿಗಳಲ್ಲಿ ಪುನರ್‌ರೂಪಿತವಾಗುತ್ತಲೇ ಇರುವುದು ಬಹಳ ವಿಶೇಷವಾದ ಸಂಗತಿಯಾಗಿದೆ. 2012ರಲ್ಲಿ ಪತ್ರಕರ್ತೆಯೊಬ್ಬರು ರಾಬಿಯಾಳಿಗೆ ಬರೆದ ಪತ್ರ ಆಫ್ಘಾನಿಸ್ತಾನವೊಂದರಲ್ಲೇ ಅಲ್ಲ, ಎಲ್ಲ ಕಡೆಗಳಲ್ಲಿ ಎಲ್ಲ ಕಾಲಗಳಲ್ಲಿ ಹೆಣ್ಣನ್ನು ಕಾಣುವ-ಕೊಲ್ಲುವ, ದಮನಿಸುವ- ಆರಾಧಿಸುವ ನಿರ್ದಯ ಸಮಾಜದ, ಕಣ್ಣಿಲ್ಲದ ಇತಿಹಾಸದ ಹೃದಯವನ್ನು ಛೇದಿಸುವಂತಿದೆ.

* * *

ನುಶಿನ್ ಅರ್ಬಾಬ್ಜಾದಾಹ್ ಓರ್ವ ಪತ್ರಕರ್ತೆ. ಸೋವಿಯಟ್ ರಷ್ಯಾ, ಕಾಬೂಲ್ ಅನ್ನು ವಶಪಡಿಸಿ ಕೊಂಡಾಗ ಹುಟ್ಟಿದವಳು, ತನ್ನ ಯೌವನದ ದಿನಗಳನ್ನು ನಿರಾಶ್ರಿತಳಾಗಿ ಕಳೆದಳು. 'ಗಾರ್ಡಿಯನ್' ಪತ್ರಿಕೆಗೆ ನಿಯಮಿತವಾಗಿ ಬರೆಯುವ ನುಶಿನ್‌ರ 'ದ ಆಫ್ಘನ್ ರೂಮರ್ ಬಜಾರ್: ಸೀಕ್ರೆಟ್ ಸಬ್ ಕಲ್ಚರ್ಸ್, ಹಿಡನ್ ವರ್ಲ್ಡ್ಸ್ ಅಂಡ್ ಎವೆರಿಡೇ ಲೈಫ್ ಆಫ್ ದಿ ಅಬ್ಸರ್ಡ್' ಸಹೃದಯರ ಗಮನಸೆಳೆದ ಕೃತಿ.

ರಹಸ್ಯಗಳನ್ನು ಹೇಳಿ ನಾವ್ಯಾರೂ ನೆಮ್ಮದಿಯಿಂದಿರಲು ಸಾಧ್ಯವಿಲ್ಲ...

ರಾಬಿಯಾಳಿಗೆ ಪತ್ರಕರ್ತೆಯೊಬ್ಬರು ಬರೆದ ಪತ್ರ

-ನುಶಿನ್ ಅರ್ಬಾಬ್ಜಾದಾಹ್

ಪ್ರೀತಿಯ ರಾಬಿಯಾ,

ನಾನು ಎಷ್ಟೋ ಶತಮಾನಗಳನ್ನು ದಾಟಿಬಂದು ನಿನ್ನೊಂದಿಗೆ ಮಾತಾಡುತ್ತಿದ್ದೇನೆ. 2012ಕ್ಕೆ ಲೆಕ್ಕ ಹಾಕಿದರೆ ನಿನ್ನನ್ನು ಕೊಂದು ಒಂದು ಸಾವಿರದ ಅರವತ್ತೊಂಬತ್ತು ವರ್ಷಗಳಾದವು. ದಾಖಲೆಗಳ ಪ್ರಕಾರ, ನಿನ್ನ ಹತ್ಯೆ ಮೊದಲ ಮರ್ಯಾದೆಗೇಡು ಹತ್ಯೆಗೆ ಅತ್ಯುತ್ತಮ ಉದಾಹರಣೆಯಾಗಿದೆ.

ಮೊದಲೇ ಹೇಳಿಬಿಡುತ್ತೇನೆ ರಾಬಿಯಾ, ನಾನು ನಿನ್ನ ಕಾವ್ಯದ ಬಗ್ಗೆ ಯೋಚಿಸುವುದಿಲ್ಲ. ನೀನು ಮೊದಲ ಪ್ರಸಿದ್ಧ ಆಫ್ಘನ್ ಕವಯತ್ರಿ, ಸಂತೆ, ಸುಂದರಿ, ಸಂಭಾವಿತೆ ಎಂಬುದೆಲ್ಲ ಗೊತ್ತು. ನಮ್ಮ ಪರ್ಶಿಯನ್ ಭಾಷೆ ಹುಟ್ಟಿದಾಗ ನೀನು ಹುಟ್ಟಿದೆ, ನಿನ್ನ ಸಮಾಧಿಯನ್ನು ಜನ ಪೂಜಿಸುತ್ತಾರೆ ಎಂಬುದೂ ಗೊತ್ತು. ನನಗೆ ನಿನ್ನ ಕಾವ್ಯದ ಬಗ್ಗೆ ಆಸಕ್ತಿಯಿಲ್ಲ. ಪ್ರೇಮ, ಸುಳ್ಳು ಹಾಗೂ ಹಿಂಸೆ ತುಂಬಿರುವ ನಮ್ಮಂಥ ದೇಶದಲ್ಲಿ ಎಲ್ಲರೂ ಕವಿತೆ ಬರೆಯುತ್ತಾರೆ. ಪ್ರತಿಯೊಬ್ಬರೂ ಕವಿತೆ ಬರೆಯುತ್ತಾರೆ – ಸೇನಾಪತಿಗಳೂ. ನಮ್ಮ ಹುಡುಗಿಯರು ಎಲ್ಲ ಕಡೆ ಕವಿತೆ ಬರೆಯುತ್ತಾರೆ – ಸೆರೆಮನೆಯ ಗೋಡೆಗಳ ಮೇಲೆ, ಗುಡಿಸಲಿನ ಗೋಡೆಗಳ ಮೇಲೆ. ಹುಡುಗಿಯರ ಕವಿತೆಗಳಿಗಾಗಿ ರೇಡಿಯೋ ಸ್ಟೇಷನ್ ಸಹ ಇದೆ. ಅಲ್ಲಿಗೆ ಅವರು ಅಡುಗೆಮನೆಗಳಿಂದ ಕದ್ದು ಬಂದು ಸ್ಟೇಷನ್ನಿಗೆ ಫೋನು ಮಾಡಿ ಕವಿತೆ ಓದುತ್ತಾರೆ. ಸತ್ಯ ಹೇಳುವುದಕ್ಕೆ